**ಸಾಕ್ಷಿಗೆ ದಿನಾಂಕಃ11-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**::ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. SNM ವಕೀಲರಿಂದ ::**

ಸಾಕ್ಷಿಗೆ ಒಂದು ನೋಂದಾಯಿತ ವಿಭಾಗ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸದರಿ ಪತ್ರವು ಶಿವಲಿಂಗಪ್ಪಜ್ಜ ರವರ ಮಕ್ಕಳು ನಡುವ ಆದ ವಿಭಾಗ ಪತ್ರ ಎಂದು ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. 18.03.1976 ರಂದು ನಾಗಪ್ಪನ ಮಕ್ಕಳ ಪೈಕಿ ಗಂಗಾಧರಪ್ಪನ ಕುಟುಂಬದಲ್ಲಿ ಒಂದು ವಿಭಾಗ ತಪ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಅದನ್ನು ಸಾಕ್ಷಿ ಗುರುತಿಸಿದ ಕಾರಣ ಅದನ್ನು ನಿಡಿ2 ಎಂದು ಗುರುತಿಸಲಾಯಿತು. ಪ್ರತಿವಾದಿಗಳ ಕುಟುಂಬಕ್ಕೂ ಹಾಗೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ನಿಪಿ9 ನಮ್ಮ ಕುಟುಂಬಕ್ಕೆ ಸೇರಿದ ದಾಖಲೆ ಆಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಪ್ರಸ್ತುತದಲ್ಲಿ ಪ್ರತಿವಾದಿಗಳ ಕುಟುಂಬದವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ರೀತಿ ಖಾತೆ ಮಾಡಲು ಎಸಿ ರವರಿಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ವಿಧವೆಯಾದ ಕಾರಣ ಅವರಿಗೆ ತೊಂದರೆ ಕೊಡುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: